ಸ್ಮರಣಿಕೆಗಳ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿದ್ದರು. ಕೆಲ ಮಹಿಳೆಯರು ಕಸೂತಿ ಹಾಕುತ್ತಾ ಕುಳಿತಿದ್ದವರು, ನಾವು ಹೋದೊಡನೆ ಅದನ್ನು ಪಕ್ಕಕ್ಕಿಟ್ಟು ನಮಗೆ ಬೇಕಾದ ವಸ್ತುಗಳನ್ನು ಕೊಡುತ್ತಿದ್ದರು. ಆಧುನಿಕ ಹೆಣ್ಣುಮಕ್ಕಳ ಕೈಲಿ ಮೊಬೈಲ್ ಬಂದಿದೆ. ಅವರು ಅದರಲ್ಲಿ ತಲ್ಲೀನರು.

ಊಟಕ್ಕೆ ಕಲ್ದ್ರಮ ಎಂಬ ರೆಸ್ಟೋರೆಂಟ್‌ಗೆ ಬಂದೆವು. ಉಪ್ಪರಿಗೆಯಲ್ಲಿ ಕುಳಿತು ನಗರವನ್ನು ನೋಡುತ್ತಾ ಊಟಕ್ಕೆ ಕುಳಿತ ನಮಗೆ ಮಾರ್ಗದರ್ಶಿಯು ಇಲ್ಲಿನ ನೋವಿನ ಕಥೆಯನ್ನು ಬಿಚ್ಚಿಟ್ಟರು.



ಸೇತುವೆಯ ಮೇಲೆ ಕಲ್ಲುಗಳ ಸುಂದರ ಜೋಡಣೆ

'ಜಗತ್ತಿನ ಅತ್ಯುತ್ತಮ ಬಿಯರ್ ಉತ್ಪಾದಕ ದೇಶ'ವೆಂದು ಹೆಸರಾದ ಬೋಸ್ನಿಯಾ ಆತ್ಮದೊಳಗೆ ಇಣುಕಿದರೆ ರಕ್ತಸಿಕ್ತ ಕಥೆಗಳು ನೂರೆನೂರೆಯಾಗಿ ಹೊರಹೊಮ್ಮುತ್ತವೆ. ಯುದ್ಧ ಎಲ್ಲಿ ನಡೆದರೂ, ಅದರ ಹಿಂಸೆಯನ್ನು ದೈಹಿಕವಾಗಿ ಅನುಭವಿಸುವವರು ಮಹಿಳೆಯರು ಮಾತ್ರ. ಸೋವಿಯತ್ ಒಕ್ಕೂಟ ಛಿದ್ರವಾದ ಮೇಲೆ ಸಂಯುಕ್ತ ಯುಗೊಸ್ಲಾವಿಯಾ ಒಡೆದು ಹಲವು ರಾಷ್ಟ್ರಗಳಾಗಿ ಗುರುತಿಸಿಕೊಂಡಿತು. ಬೋಸ್ನಿಯಾ, ಹರ್ಜೆಗೋವಿನಾ, ಕ್ರೊಯೇಷಿಯಾ, ಮೆಸಿಡೋನಿಯಾ ಮತ್ತು ಸ್ಲೊವೇನಿಯಾ ಎಂದು ಐದು ದೇಶಗಳಲ್ಲಿ ಹರಿದು ಹಂಚಿಹೋಯಿತು. ಮುಂದೆ ಮತ್ತೆ ಸರ್ಬಿಯಾ, ಮಾಂಟೆನೆಗ್ರೊ ಮತ್ತು ಕೊಸೊವೊಗಳಾಗಿ ವಿಂಗಡನೆಗೊಂಡಿತು.

1989ರಲ್ಲಿ ಸರ್ಬಿಯಾದ ರಾಷ್ಟ್ರಪತಿಯಾಗಿದ್ದ ಸ್ಲೊಬೊದಾನ್ ಮಿಲೊಸೆವಿಚ್, ಸರ್ಬಿಯಾದ ಜನರಲ್ಲಿ ಉಗ್ರ ರಾಷ್ಟ್ರೀಯತೆಯನ್ನು ಬಿತ್ತಿದ. ಸರ್ಬಿಯನ್ನರು ಮಿಲೊಸೆವಿಚ್‌ನ ವಾದವನ್ನು ಒಪ್ಪಿ, ಉಗ್ರತೆಯ ವ್ಯಸನಕ್ಕೆ ಒಳಗಾಗಿ ಹಿಂಸೆಗಿಳಿದರು. ಕ್ರೊಯೇಷಿಯಾ ಮತ್ತು ಬೋಸ್ನಿಯಾ ವಿರುದ್ಧ ನಡೆದ ಯುದ್ಧದ ಉದ್ದೇಶ, ಇಲ್ಲಿನ ನಾಗರಿಕರು ತಮ್ಮ ಹಳ್ಳಿ, ನಗರಗಳನ್ನು ಬಿಟ್ಟು ವಲಸೆ ಹೋಗುವಂತಾಗಬೇಕು. ಹೀಗಾಗಿ ಸೈನಿಕರು ಸಾಮಾನ್ಯ ಜನರನ್ನು ಗುರಿಯಾಗಿಸಿಕೊಂಡು ಬೇಟೆಯಾಡಿದರು. ಸಾಮೂಹಿಕ ಹತ್ಯೆಗಳನ್ನು ಕೈಗೊಂಡರು. ವ್ಯವಸ್ಥಿತವಾಗಿ ಅತ್ಯಾಚಾರಗಳಂಥ ಘೋರಕೃತ್ಯಕ್ಕೆ ಕೈಹಾಕಿದರು. ಯಾತನಾ ಶಿಬಿರಗಳನ್ನು ನಿರ್ಮಿಸಿದರು. ಯುದ್ಧದ ಪರಿಣಾಮವಾಗಿ ಇಪ್ಪತ್ತು ಲಕ್ಷ ಜನ ಮನೆಮಾರು ಕಳೆದುಕೊಂಡರು. ಅದಕ್ಕಾಗಿಯೇ ಈಗಲೂ ಕ್ರೊಯೇಷಿಯಾ, ಬೋಸ್ನಿಯಾ ಮತ್ತು ಹರ್ಜೆಗೋವಿನಾದ ಜನಸಾಮಾನ್ಯರು ಸ್ಲೊಬೊದಾನ್ ಮಿಲೊಸೆವಿಚ್‌ನನ್ನು ದ್ವೇಷಿಸುವರು.

ಇಲ್ಲಿನ ನಾಗರಿಕರು ವ್ಯಾಪಾರ ಮತ್ತು ವಹಿವಾಟಿನಲ್ಲಿ ತೊಡಗಿಕೊಂಡಿದ್ದರು. ಜನರಿಗೆ ಯಾವ ಸಮಸ್ಯೆಗಳು ಕೂಡ ಇರಲಿಲ್ಲ. ಇದೆಲ್ಲ ಸೃಷ್ಟಿಯಾದದ್ದು ದೇಶದೊಳಗಿನ ರಾಜಕಾರಣಿಗಳ ಅಧಿಕಾರ ದಾಹದ ಪೈಪೋಟಿಯಿಂದ.

1992ರಿಂದ 1995ರವರೆಗೆ ಕ್ರೊಯೇಷಿಯಾ, ಬೋಸ್ನಿಯಾ, ಹರ್ಜೆಗೋವಿನಾದ ಮಹಿಳೆಯರು ಸರ್ಬಿಯನ್ ಸೈನ್ಯದ ಅಮಾನವೀಯ ನಡವಳಿಕೆಗೆ ತುತ್ತಾದರು. ಯುದ್ಧ ಕಾಲದಲ್ಲಿ ಸಾವಿರಾರು ಅತ್ಯಾಚಾರಗಳು, ಲೈಂಗಿಕ ಹಿಂಸೆಗಳು ನಡೆದವು. ಒಂದು ವರದಿಯ ಪ್ರಕಾರ ಬೋಸ್ನಿಯಾದಲ್ಲಿ ಒಟ್ಟು ಐವತ್ತು ಸಾವಿರ ಮಹಿಳೆಯರು ಅತ್ಯಾಚಾರಕ್ಕೆ ಒಳಗಾದರು.

ಬೋಸ್ನಿಯಾ, ಹರ್ಜೆಗೋವಿನಾ, ಕ್ರೊಯೇಷಿಯಾಗಳ ವಿರುದ್ಧ ನಡೆದ ಯುದ್ಧದಲ್ಲಿ ಸರ್ಬಿಯಾ 480 ಯಾತನಾ ಶಿಬಿರಗಳನ್ನು ನಿರ್ಮಿಸಿತ್ತು. ಸೈನಿಕರು ಸಣ್ಣ ಸಣ್ಣ ಗುಂಪುಗಳನ್ನು ಮಾಡಿಕೊಂಡು ಅಲ್ಲಿನ ಹಳ್ಳಿಗಳ ಮೇಲೆ ಆಕ್ರಮಣ ಮಾಡಿದರು. ಇವರ ಆಕ್ರಮಣಕ್ಕೆ ಗುರಿಯಾದದ್ದು ಹೆಂಗಸರು ಮತ್ತು ಮಕ್ಕಳು. 1991 1995ರವರೆಗೆ ಸರ್ಬಿಯಾದ ಸೈನಿಕರು ದೊಡ್ಡ ಪ್ರಮಾಣದ ಲೈಂಗಿಕ ಶೋಷಣೆಗಳನ್ನು ನಡೆಸಿದರು.

ಇವೆಲ್ಲವು ಸಾರ್ವಜನಿಕವಾಗಿ ಸಂಭವಿಸಿದವು. ಬೋಸ್ನಿಯಾ ಮತ್ತು ಹರ್ಜೆಗೋವಿನಾದ ಮೇಲೆ ಎಲ್ಲಿಯವರೆಗೆ ಸರ್ಬಿಯಾದ ಹಿಡಿತವಿತ್ತೊ ಆಗ ಆ ದೇಶದ ಹೆಣ್ಣುಮಕ್ಕಳು ಒಂದಿಲ್ಲೊಂದು ಲೈಂಗಿಕ ಶೋಷಣೆಗೆ ತುತ್ತಾದರು. ಯುದ್ಧ ಶುರುವಾದಾಗ ಕುಟುಂಬಗಳೆಲ್ಲ ಅನಿವಾರ್ಯವಾಗಿ ಹಳ್ಳಿಗಳನ್ನು ಬಿಟ್ಟು ಹೋಗಬೇಕಾಯಿತು.

ಮಿಲೊಸೆವಿಚ್‌ನ ಸೈನ್ಯವನ್ನು ಹತ್ತಿಕ್ಕಲು ಸಂಯುಕ್ತ ರಾಷ್ಟ್ರ ಸಂಘವು ಅಂತರರಾಷ್ಟ್ರೀಯ ಸ್ತರದಲ್ಲಿ ಒಪ್ಪಂದ ಮಾಡಿಕೊಂಡವು. ಆದರೆ ಇದೆಲ್ಲ ನಡೆದದ್ದು ಸಾಕಷ್ಟು ಅನಾಹುತಗಳು ಸಂಭವಿಸಿದ ಮೇಲೆ. ನಾಲ್ಕು ವರ್ಷಗಳ ಕಾಲ ಉಗ್ರರಾಷ್ಟ್ರವಾದಿ ಮಿಲೊಸೆವಿಚ್ 'ಸಂಪೂರ್ಣ ಶುದ್ಧ ಸರ್ಬಿಯಾ'ಕ್ಕಾಗಿ ತನ್ನ ಸೈನಿಕರನ್ನು ಹುರಿದುಂಬಿಸಿದ್ದ. 'ಎಥ್ನಿಕ್ ಕ್ಲೆಂಜಿಂಗ್' ಸಲುವಾಗಿ ಆಜ್ಞೆ ಹೊರಡಿಸಿದ್ದ. ಆತನ ಶುದ್ಧ ಜನಾಂಗೀಯ ಕಲ್ಪನೆ ಇತರ ಸಮುದಾಯಗಳ ಸಾವುನೋವಿಗೆ ಕಾರಣವಾಗಿತ್ತು. ಯುದ್ಧದ ನಂತರ ದೇಹ, ಮನಸ್ಸಿಗಾದ ಗಾಯಗಳು, ನಿರುದ್ಯೋಗದಿಂದ ಕೂಡಿದ್ದ ಹೆಣ್ಣುಮಕ್ಕಳು ಮಾನವ ಕಳ್ಳಸಾಗಣೆ ಎಂಬ ಕೂಪಕ್ಕೆ ಸಿಲುಕಿದರು. ದೇಹದ ಗಾಯಗಳು ವಾಸಿಯಾಗಬಹುದು, ಆದರೆ ಮನಸ್ಸಿನ ಗಾಯಗಳು ಇನ್ನೂ ಹೆಚ್ಚಾಗುತ್ತವೆ. ಇಲ್ಲಿನ ಸಾವಿರಾರು ಹೆಣ್ಣುಮಕ್ಕಳು ಇಂಥ ಗಾಯಗಳಿಂದ ಇನ್ನೂ ನರಳುತ್ತಿದ್ದಾರೆ. ಹಿಂಸೆ, ಕಗ್ಗೊಲೆ, ಅತ್ಯಾಚಾರಗಳಿಂದಾಗಿ ಇಲ್ಲಿನ ಜನ ಜರ್ಜರಿತರಾಗಿದ್ದಾರೆ. ಮೇಲೆ ಶಾಂತ ಮತ್ತು ಸುಂದರ. ಆದರೆ ಒಳಗೆ ಸದಾ ಕುದಿಯುತ್ತಲೇ ಇರುವ ಜ್ವಾಲಾಮುಖಿ. ಇವರ ದುಃಖದಿಂದ ಈ ನೆಲ ತೊಯ್ದಿದೆ ಎಂದು ನಮ್ಮ ಮಾರ್ಗದರ್ಶಿ ಹೇಳುತ್ತಾ ನಿಟ್ಟುಸಿರಾದರು.

ಇವರ ಕಥೆಗಳನ್ನು ಕೇಳಿಸಿಕೊಂಡು ನಮ್ಮ ಮನಸ್ಸು ಮ್ಲಾನವಾಯಿತು. ಹೊರಗೆ ನೋಡಲು ಸುಂದರವಾಗಿರುವ ದೇಶಗಳ ಒಳಗಡೆ ಇತಿಹಾಸದ ಆಳವಾದ ಗಾಯಗಳು, ಯುದ್ಧಗಳು, ವಿಭಜನೆಗಳು, ಕಳೆದುಕೊಂಡ ಬದುಕುಗಳು ಅಡಗಿಕೊಂಡಿರುತ್ತವೆ. ಆ 'ಮಾಯ' ಎನ್ನಿಸುವ ಸೌಂದರ್ಯದ ಹಿಂದೆ ಅಷ್ಟೊಂದು ಮಾಯದ ನೋವು ಇರುವುದನ್ನು ಅರಿತಾಗ ಮನಸ್ಸು ಭಾರವಾಗುತ್ತದೆ.

ಆದರೆ ಅದೇ ಸಮಯದಲ್ಲಿ ಒಂದು ಸಣ್ಣ ಆಸೆಯೂ ಚಿಗುರುತ್ತದೆ– ಇಷ್ಟೆಲ್ಲಾ ಅನುಭವಿಸಿದರೂ ಈ ದೇಶ, ಇದರ ಜನ, ಇವರ ಸಂಸ್ಕೃತಿ ಇನ್ನೂ ಬದುಕುತ್ತಿವೆ, ಹಾಡುತ್ತಿವೆ, ಮುಂದಕ್ಕೆ ಸಾಗುತ್ತಿವೆ. ಅದೇ ಮಾನವ ಆತ್ಮದ ಶಕ್ತಿ. ■



ಬುಲೆಟ್‌ಗಳಿಂದ ಮಾಡಿರುವ ಪೆನ್ನುಗಳು